ಸೃಜನಿ
SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 16-19
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕರ್ನಾಟಕದಲ್ಲಿ ಮರಾಠ ಸಂಸ್ಥಾನಿಕರ ಆಳ್ವಿಕೆ

**ಸುರೇಶ್ ಟಿ**
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
*ಮರಾಠ ಸಾಮ್ರಾಜ್ಯ ಅಥವಾ ಮರಾಠ ಒಕ್ಕೂಟವು ಇಂದಿನ ಭಾರತದಲ್ಲಿ 1674 ರಿಂದ 1818 ರವರೆಗೆ ಆಳ್ವಿಕೆ ಮಾಡಿತು. ತನ್ನ ತುತ್ತತುದಿಯನ್ನು ಮುಟ್ಟಿದಾಗ ಅದು 250 ದಶಲಕ್ಷ ಎಕರೆ (ಒಂದು ದಶಲಕ್ಷ ಚದರ ಕಿ.ಮೀ) ಗಳಷ್ಟು ಅಂದರೆ ದಕ್ಷಿಣ ಏಷ್ಯಾದ ಮೂರನೇ ಒಂದು ಭಾಗದಷ್ಟು ಪ್ರದೇಶವನ್ನು ಹೊಂದಿತ್ತು. ಬಿಜಾಪುರದ ಆದಿಲಶಾಹ ಮತ್ತು ಮುಘಲ್ ಚಕ್ರವರ್ತಿ ಔರಂಗಜೇಬರೊಂದಿಗೆ ಗೆರಿಲ್ಲಾ ಹೋರಾಟ ಮತ್ತು ಅನೇಕ ಸಾಹಸಗಳ ಮೂಲಕ ರಾಯಗಢವನ್ನು ರಾಜಧಾನಿಯಾಗಿಟ್ಟುಕೊಂಡ ಸ್ವತಂತ್ರ ಮರಾಠಾ ರಾಜ್ಯವೊಂದನ್ನು ಸ್ಥಳೀಯ ರಾಜ ಶಿವಾಜಿಯು 1674 ರಲ್ಲಿ ಸ್ಥಾಪಿಸಿದನು. ಶಿವಾಜಿಯ ವಂಶಸ್ಥರು ಹಾಗೂ ಇತರೆ ಮರಾಠ ಸಂಸ್ಥಾನಿಕರು ಕರ್ನಾಟಕವನ್ನು ಆಳ್ವಿಕೆ ಮಾಡಿದ್ದಾರೆ.*

***Keywords:*** *ಮರಾಠ ಸಂಸ್ಥಾನಿಕರು, ಸೊಂಡೂರು ಸಂಸ್ಥಾನಿಕರು, ಜಮಖಂಡಿ ಸಂಸ್ಥಾನಿಕರು, ಮುಧೋಳ ಸಂಸ್ಥಾನಿಕರು.*

## ಪೀಠಿಕೆ

ಮರಾಠ ಸಾಮ್ರಾಜ್ಯ ಅಥವಾ ಮರಾಠ ಒಕ್ಕೂಟವು ದಕ್ಷಿಣ ಏಷ್ಯಾದ ಮೂರನೇ ಒಂದು ಭಾಗದಷ್ಟು ಪ್ರದೇಶವನ್ನು ಹೊಂದಿತ್ತು. ಶಿವಾಜಿಯು ರಾಯಗಢವನ್ನು ರಾಜಧಾನಿಯಾಗಿಟ್ಟುಕೊಂಡ ಸ್ವತಂತ್ರ ಮರಾಠಾ ರಾಜ್ಯವೊಂದನ್ನು 1674ರಲ್ಲಿ ಸ್ಥಾಪಿಸಿದನು. ಶಿವಾಜಿಯ ನಂತರ ಮೊಮ್ಮಗ ಶಾಹುವು 1749 ರವರೆಗೆ ಚಕ್ರವರ್ತಿಯಾಗಿ ಆಳಿದನು. ತನ್ನ ಆಳಿಕೆಯ ಕಾಲದಲ್ಲಿ ಶಾಹುವು ಪೇಶ್ವೆಯನ್ನು ಸರಕಾರದ ಮುಖ್ಯಸ್ಥನನ್ನಾಗಿ ನೇಮಿಸಿದನು. ಶಾಹುವಿನ ಮರಣಾನಂತರ 1749 ರಿಂದ 1761 ರವರೆಗೆ ಪೇಶ್ವೆಗಳು ವಸ್ತುಶಃ ಸಾಮ್ರಾಜ್ಯದ ಅಧಿಪತಿಗಳೇ ಆದರು. ಈ ಅವಧಿಯಲ್ಲಿ ಶಿವಾಜಿಯ ನಂತರ ಬಂದವರು ಸತಾರಾದ ತಮ್ಮ ನೆಲೆಯಿಂದ ಹೆಸರಿಗೆ ಮಾತ್ರ ರಾಜರಾಗಿ ಮುಂದುವರೆದರು.

## ಸೊಂಡೂರು ಸಂಸ್ಥಾನಿಕರ ಆಳ್ವಿಕೆ

ಸೊಂಡೂರು ಸಂಸ್ಥಾನವು ಘೋರ್ಪಡೆ ರಾಜಮನೆತನದ ಸಂಸ್ಥಾನವಾಗಿ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಸೊಂಡೂರು ಸಂಸ್ಥಾನದ ಮೂಲ ಪುರುಷ ಸಿದ್ದೋಜಿರಾವ್ ಘೋರ್ಪಡೆಯಾಗಿದ್ದು ಈತನಿಗಿಂತಲೂ ಹಿಂದೆ ಘೋರ್ಪಡೆ ವಂಶಸ್ಥರ ಇತಿಹಾಸವು ವ್ಯಾಪಕವಾದ ವಿಸ್ತಾರವನ್ನು ಪಡೆದಿದೆ. ಇತಿಹಾಸದ ಆಧಾರಗಳಿಂದ ಇವರ ಮೂಲಪುರುಷ ರಾಜಸ್ಥಾನದಲ್ಲಿನ ಚಿತ್ತೋರು ಸಂಸ್ಥಾನದ ಸಿಸೋಡಿಯ ವಂಶದ "ಸುಜನ್‌ಸಿಂಗ್ ಅಥವಾ

***Please cite this article as:*** ಸುರೇಶ್ ಟಿ. (2024). ಕರ್ನಾಟಕದಲ್ಲಿ ಮರಾಠ ಸಂಸ್ಥಾನಿಕರ ಆಳ್ವಿಕೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 16–19

ಸುಜ್ಜನ್‌ಸಿಂಗ್" ಎಂದು ಗುರುತಿಸಲಾಗಿದೆ. ಕ್ರಿ.ಶ. 1333ರಲ್ಲಿ ದೆಹಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯು ಚಿತ್ತೋರನ್ನು ಆಕ್ರಮಿಸಿಕೊಂಡಾಗ ಅಲ್ಲಿಂದ ದಕ್ಷಿಣದ ಕಡೆಗೆ ವಲಸೆ ಬಂದರು. ಇವರನ್ನು ಶಿವಾಜಿಯ ಪೂರ್ವಿಕರೆಂದು ಗುರುತಿಸಲಾಗುತ್ತದೆ. ಘೋರ್ಪಡೆ ಎಂಬುದು ಈ ವಂಶಸ್ಥರ ಉಪನಾಮವಾಗಿದ್ದು ಅಭೇದ್ಯವಾದ ಕೋಟೆಯೊಂದನ್ನು ಇವರ ಪೂರ್ವಿಕರು ಹೆಚ್ಚು ಚಾಣಾಕ್ಷತನದಿಂದ ವಶಪಡಿಸಿಕೊಂಡಿದ್ದರು.

ಸಿದ್ಧೋಜಿ ಘೋರ್ಪಡೆಯಿಂದ ಆರಂಭವಾದ ಈ ಸೊಂಡೂರು ಸಂಸ್ಥಾನ ಹಲವಾರು ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ಸೊಂಡೂರು ಸಂಸ್ಥಾನ ಆಳ್ವಿಕೆ ಮಾಡಿದ ಪ್ರಮುಖ ಸಂಸ್ಥಾನಿಕರಲ್ಲಿ ಸಿದ್ಧೋಜಿರಾವ್ ಘೋರ್ಪಡೆ, ಮುರಾರಿರಾವ್ ಘೋರ್ಪಡೆ, ಶಿವರಾಯ ವೆಂಕಟರಾಯ, ಶಿವಷಣ್ಮುಖರಾಯ, ವೆಂಕಟರಾವ್, ಯಶವಂತರಾವ್, ಹಿಂದೂರಾವ್ ಘೋರ್ಪಡೆಯವರು ಪ್ರಮುಖರಾಗಿದ್ದಾರೆ.

**ಜಮಖಂಡಿ ಸಂಸ್ಥಾನಿಕರ ಆಳ್ವಿಕೆ**

ಜಮಖಂಡಿ ಉತ್ತರ ಕರ್ನಾಟಕದ ಪಶ್ಚಿಮಘಟ್ಟಗಳ ನೈಸರ್ಗಿಕ ಸಂಪನ್ಮೂಲಗಳನ್ನೊಳಗೊಂಡ ಪ್ರದೇಶ. ಮಹಾರಾಷ್ಟ್ರದ ಗಡಿ ಪಟ್ಟಣಗಳಾದ ಮೀರಜ್ ಮತ್ತು ಸಾಂಗ್ಲಿಗೆ ಹತ್ತಿರದಲ್ಲಿದೆ. ಇದು ಕೃಷ್ಣಾ ನದಿಯ ಜಲಾಯನ ಪ್ರದೇಶವಾಗಿದ್ದು, ಗುಡ್ಡಗಾಡು ಪ್ರದೇಶಗಳನ್ನು ಒಳಗೊಂಡಿದೆ. ಈಗ ಜಮಖಂಡಿ ಬಾಗಲಕೋಟೆ ಜಿಲ್ಲೆಯ ಪ್ರಮುಖ ತಾಲೂಕು ಹಾಗೂ ಉಪವಿಭಾಗ ಕೇಂದ್ರವಾಗಿದೆ. ಇದು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮಹತ್ವದ ನೆಲೆಯಾಗಿ ಬೆಳೆದು ಬಂದಿರುವ ಐತಿಹಾಸಿಕ ಪಟ್ಟಣ.

ಜಮಖಂಡಿಯ ಅರಸರು 'ಚಿತ್ಪಾವನ' ಬ್ರಾಹ್ಮಣ ಜಾತಿಯವರು. ಮೂರನೇ ರತ್ನಗಿರಿಯ ಕೋಟವಾಡದವರು. ಹರಿಭಟ್ ಇವರು ಚಿತ್ಪಾವನ ಬ್ರಾಹ್ಮಣ ಕುಟುಂಬದ ಪೂಜಾರಿ. ಇಚಲಕರಂಜಿಯ ಮುಖ್ಯಸ್ಥ ಹರಿಭಟ್ ಅವರಿಗೆ ಮೂವರು ಪುತ್ರರು ಪೇಶ್ವೆಯ ಸೇವೆ ಮಾಡುತ್ತಿದ್ದರು. ಯುದ್ಧದ ಸಮಯದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಪೇಶ್ವೆಯು ಅವರ ಧೈರ್ಯ ಮತ್ತು ಸಾಹಸವನ್ನು ಗೌರವಿಸಿ ಅವರಿಗೆ ಜಮಖಂಡಿ, ತಸ್ಗಾಂವ್, ಮೀರಜ್, ಸಾಂಗ್ಲಿ ಮತ್ತು ಕುರುಂದ್ವಾಡನ್ನು ಜಹಗೀರ್‌ಗಳಾಗಿ ನೀಡಿದರು.

**ಜಮಖಂಡಿ ಸಂಸ್ಥಾನದ ಪ್ರಮುಖ ಸಂಸ್ಥಾನಿಕರು**

ಜಮಖಂಡಿ ಸಂಸ್ಥಾನವು ಮೊದಲು ಥಾಸಗೂನ್(Tusggaon) ಪ್ರದೇಶದ ಒಂದು ಭಾಗವಾಗಿತ್ತು. ಆ ಪ್ರದೇಶವನ್ನು ಪರಶುರಾಮ್ ಭಾವ ಪಟವರ್ಧನ್ ಕ್ರಿ.ಶ. 1763–64 ರಲ್ಲಿ ಸ್ಥಾಪನೆ ಮಾಡಿದರು. ಆ ಪ್ರದೇಶವು ಮರಾಠರ ಆಳ್ವಿಕೆಯಲ್ಲಿ ವಿಸ್ತಾರವಾಗಿತ್ತು. ಇವರು ಬ್ರಿಟಿಷ್ ಆಳ್ವಿಕೆ ಬರುವವರೆಗೆ ಆಡಳಿತ ನಡೆಸಿದರು. ಪರಶುರಾಮ್ ಭಾವ ಪಟವರ್ಧನ್ ಇವರು ಉತ್ತಮ ಮಿಲಿಟರಿ ಅಧಿಕಾರಿಯಾಗಿದ್ದು, ಇವರ ಪೂರ್ವಜರು ನಡೆಸಿದ ಆಳ್ವಿಕೆಯನ್ನು ಮುಂದುವರಿಸಿಕೊಂಡು ಬಂದರು. ಪಟವರ್ಧನ್ ಕುಟುಂಬಗಳು ಕಾಥವಾಡ, ಕಾನ್‌ಕೂನ್ ಪೊನ್, ಈ ಭಾಗದಲ್ಲಿ ಹೆಚ್ಚಾಗಿ ನೆಲೆಸಿದ್ದವು.

ಶ್ರೀಮಂತ್ ಗೋಪಾಲರಾವ್ ಪಟವರ್ಧನ್, ಗೋಪಾಲರಾವ್ ರಾಮಚಂದ್ರರಾವ್ ಪಟವರ್ಧನ್, ಪರಶುರಾಮ್ ರಾವ್ ರಾಮಚಂದ್ರರಾವ್ ಅಥವಾ ಬಾವುಸಾಹೇಬ್ ಪಟವರ್ಧನ್, ರಾಮಚಂದ್ರರಾವ್ ಅಥವಾ ಅಪ್ಪಾಸಾಹೇಬ್ ಪಟವರ್ಧನ್, ಹಾಗೂ ಶಂಕರರಾವ್ ಪರಶುರಾಮರಾವ್ ಅಥವಾ ಅಪ್ಪಾಸಾಹೇಬ್ ಪಟವರ್ಧನ್ ಇವರು ಸಂಸ್ಥಾನದ ಪ್ರಮುಖ ಆಸ್ಥಾನಿಕರಾಗಿದ್ದಾರೆ.

**ಗಜೇಂದ್ರಗಢ ಸಂಸ್ಥಾನಿಕರ ಆಳ್ವಿಕೆ**

ಪೇಶ್ವೆಗಳು ಈ ಸಂಸ್ಥಾನಗಳ ಎಲ್ಲಾ ಅಧಿಕಾರ ಮತ್ತು ಶಕ್ತಿಯನ್ನು ಸರದಾರರಿಗೆ ನೀಡಿದರು.

ಮುಖ್ಯವಾಗಿ ಸಿಂಧೆ, ಹೋಲ್ಕರ್, ಗಾಯಕವಾಡ್, ಸವತ್ ಇವರು ಉತ್ತರ ಭಾಗದಲ್ಲಿ ಅಧಿಕಾರ ನಡೆಸಿದರು. ನಂತರ ಘೋರ್ಪಡೆ, ದೇಸಾಯಿ, ಪವಾರ್, ಪಟವರ್ಧನರು ದಕ್ಷಿಣ ಭಾಗದಲ್ಲಿ ಆಡಳಿತ ನಡೆಸಿದರು. ಪಟವರ್ಧನರು ದಕ್ಷಿಣ ಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದರು. ಘೋರ್ಪಡೆಯ ಮನೆತನದವರು ಗಜೇಂದ್ರಗಡ, ಸೊಂಡೂರು ಮುಧೋಳ್ ಪ್ರದೇಶಗಳನ್ನು ಜಹಗೀರುದಾರರಾಗಿ ಆಡಳಿತ ನಡೆಸಿದರು.

ಗಜೇಂದ್ರಗಡ ಎಂದರೆ 'ಕೋಟೆ' ಸ್ಥಳೀಯ ಜನರು ಸಾಮಾನ್ಯವಾಗಿ 'ಗಢಾ' ಎಂದು ಕರೆಯುತ್ತಾರೆ ಗಜೇಂದ್ರಗಡದ ಮೂಲ ಹೆಸರು 'ಗಜಪುರ' ಅನಂತರ ಗಜೇಂದ್ರಗಡ ಎಂದು ಹೆಸರಾಯಿತು. ಕ್ರಿ.ಶ. 5ನೇ ಶತಮಾನದಿಂದ ಈ ಪ್ರದೇಶ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತು. ಮುಖ್ಯವಾಗಿ ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಬಾದಾಮಿ ಚಾಲುಕ್ಯರು, ಕಾಕತೀಯರು, ಬಹಮನಿ ಸುಲ್ತಾನರು, ವಿಜಯನಗರ ಸಾಮ್ರಾಜ್ಯ ಅರಸರು ಆಳ್ವಿಕೆ ನಡೆಸಿದ್ದರು.

**ಮುಧೋಳ ಸಂಸ್ಥಾನಿಕರ ಆಳ್ವಿಕೆ**

ಮುಧೋಳ ಸಂಸ್ಥಾನವು ದಕ್ಷಿಣ ಮಹಾರಾಷ್ಟ್ರದ ಆಡಳಿತಕ್ಕೆ ಒಳಪಟ್ಟ ಮರಾಠರ ಐತಿಹಾಸಿಕ ಸಂಸ್ಥಾನವಾಗಿತ್ತು. ಮುಧೋಳ ಸಂಸ್ಥಾನವು ದಕ್ಷಿಣ ಮರಾಠ ರಾಜ್ಯಗಳಲ್ಲಿ ಅತ್ಯಂತ ಹಳೆಯ ಪ್ರಮುಖ ಸಂಸ್ಥಾನಗಳಲ್ಲಿ ಒಂದಾಗಿದೆ. ಪ್ರಸ್ತುತ ಮುಧೋಳ ಪ್ರದೇಶ ಕರ್ನಾಟಕದ ರಾಜ್ಯದ ಬಾಗಲಕೋಟೆ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿದೆ. ಈ ಪ್ರದೇಶವು ಮುಧೋಳ ಸಂಸ್ಥಾನದ ರಾಜಧಾನಿಯಾಗಿತ್ತು.

**ಮುಧೋಳ ಸಂಸ್ಥಾನದ ಹುಟ್ಟು ಮತ್ತು ಬೆಳವಣಿಗೆ**

ಮುಧೋಳ ಕುಟುಂಬ ಕರ್ನಾಟಕದಲ್ಲಿ ಯಾವ ರೀತಿಯಲ್ಲಿ ಪ್ರಾರಂಭವಾಯಿತು ಎಂಬುದರ ಬಗ್ಗೆ ಮೌಖಿಕ ಸಂಪ್ರದಾಯ ಮತ್ತು ಅದರ ಮೂಲದ ಬಗ್ಗೆ ತಿಳಿಯಬೇಕಾಗುತ್ತದೆ. ಈ ಸಂಸ್ಥಾನದಲ್ಲಿ ಆಡಳಿತ ನಡೆಸಿದ ಘೋರ್ಪಡೆ ಕುಟುಂಬ ಮೂಲಪುರುಷ 'ಸುಜನ್‌ಸಿಂಹ.' ಇವರು ಉತ್ತರ ಭಾರತದಿಂದ ದಕಿಣ ಭಾರತಕ್ಕೆ ಬಂದರು. ಈ ಹಿಂದೆ ಅವರು ರಜಪೂತ ಜನಾಂಗಕ್ಕೆ ಸೇರಿದವರು. ಘೋರ್ಪಡೆ ಕುಟುಂಬದವರು ಕ್ರಿ.ಶ. 1551ರಿಂದ ಆಡಳಿತ ಪ್ರಾರಂಭಿಸಿ ಕ್ರಿ.ಶ. 1948ವರೆಗೆ ಆಳ್ವಿಕೆ ನಡೆಸಿದರು. ಅಂದರೆ 400 ವರ್ಷಗಳ ಕಾಲ ಅಧಿಕಾರ ನಡೆಸಿದರು.

ಪ್ರಾಚೀನ ಕಾಲದಲ್ಲಿ ಈ ಪ್ರದೇಶವನ್ನು ಅನೇಕ ರಾಜವಂಶದವರು ಆಡಳಿತ ನಡೆಸಿದರು. ಪ್ರಮುಖವಾಗಿ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ದೇವಗಿರಿಯ ಯಾದವರು ಆಡಳಿತ ನಡೆಸಿದ್ದರ ಬಗ್ಗೆ ಕೆಲವು ಶಾಸನಗಳಲ್ಲಿ ಇತಿಹಾಸ ಕಂಡುಬಂದಿದೆ. 'ಮಧುಹೋಲ್ಕರ್ ಘೋರ್ಪಡೆ' ಮತ್ತು ಮರಾಠ ಸರದಾರರು ಆರಂಭದಿಂದ ಬಹಮನಿ ಸಾಮ್ರಾಜ್ಯವನ್ನು ರಕ್ಷಣೆ ಮಾಡಿದರು. ಈ ಸಾಮ್ರಾಜ್ಯದ ಅರಸರಿಗೆ ನಿಷ್ಠೆಯನ್ನು ಹೊಂದಿದ್ದರು. ಅಲ್ಲದೆ ದಕ್ಷಿಣ ಭಾಗದಲ್ಲಿ ಬಹಮನಿ ಸಾಮ್ರಾಜ್ಯದ ವಿಸ್ತರಣೆಗೆ ಇವರು ಹೆಚ್ಚು ಸಹಾಯ ಮಾಡಿದರು. 14ನೇ ಶತಮಾನದಲ್ಲಿ ಬಹಮನಿ ಸಾಮ್ರಾಜ್ಯದ ಸ್ಥಾಪಕ ಅಲ್ಲಾವುದ್ದೀನ್ ಹಸನ್‌ಗಂಗೂ ಘೋರ್ಪಡೆ ಕುಟುಂಬಕ್ಕೆ 84 ಗ್ರಾಮಗಳನ್ನು ಆಳ್ವಿಕೆ ನಡೆಸಲು ಉಡುಗೊರೆಯಾಗಿ ನೀಡಿದ. ಅಲ್ಲದೆ ಇವರಿಗೆ 'ರಾಜ' ಎಂಬ ಬಿರುದು ನೀಡಿ ಗೌರವಿಸಿದರು. ನಂತರ ಬಹಮನಿ ಸಾಮ್ರಾಜ್ಯದ ವಿಸ್ತರಣೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಎಲ್ಲಾ ದಿಕ್ಕುಗಳಲ್ಲಿ ಸಾಮ್ರಾಜ್ಯದ ವಿಸ್ತರಣೆಯಲ್ಲಿ ತಂದೆ, ಮಗನ ಪಾತ್ರ ಸುಲ್ತಾನರಿಗೆ ಸಂತೋಷವನ್ನು ಉಂಟುಮಾಡಿತು. ಇದರಿಂದ ಇವರಿಗೆ ದೇವಗಿರಿಯ ಸುತ್ತ ಮುತ್ತಲಿನ ಪ್ರದೇಶಗಳ ಜಹಗೀರುಗಳನ್ನು ನೀಡಿದರು. ಅಲ್ಲದೆ ಶಾಖ ಕುದುರೆಗಳ ಮುಖ್ಯಸ್ಥ ಹುದ್ದೆಯನ್ನು ಪಡೆದರು.

**ಮುಧೋಳ ಸಂಸ್ಥಾನದ ಆಡಳಿತ ನಡೆಸಿದ ಪ್ರಮುಖ ಸಂಸ್ಥಾನಿಕರು**

- ವೆಂಕಟರಾವ್ (ಕ್ರಿ.ಶ. 1816ರಿಂದ ಕ್ರಿ.ಶ. 1854ರವರೆಗೆ).
- ಬಲವಂತರಾವ್ (ಕ್ರಿ.ಶ. 1854ರಿಂದ ಕ್ರಿ.ಶ. 1862ರವರೆಗೆ).
- ಎರಡನೇ ವೆಂಕಟರಾವ್ (ಕ್ರಿ.ಶ. 1862ರಿಂದ ಕ್ರಿ.ಶ. 1900ರವರೆಗೆ).
- ಮೂರನೇ ಮಾಲೋಜಿರಾವ್ (ಕ್ರಿ.ಶ. 1904ರಿಂದ 1937ರವರೆಗೆ)

ಮುಧೋಳದ ಘೋರ್ಪಡೆ ಮನೆತನದ ಮೂಲ(ಅಡ್ಡಹೆಸರು)ಹೆಸರು ಭೋಸಲೆ ಶಿವಾಜಿ ಮಹಾರಾಜನ ಮನೆತನವೂ ಘೋರ್ಪಡೆಗಳ ಮನೆತನವೊಂದೇ ಎಂದು ಹೇಳುತ್ತಾರೆ. ಘೋರ್ಪಡೆಗಳ ಪೂರ್ವಜನೊಬ್ಬನು 'ಘೋರ್ಪಡ' ಎಂದರೆ ಮರಾಠಿಭಾಷೆಯಲ್ಲಿ 'ಉಡ' ಎಂದರ್ಥ. ಉಡದ ಸೊಂಟಕ್ಕೆ ಹಗ್ಗ ಕಟ್ಟಿ ಅದರ ಸಹಾಯದಿಂದ ಕೋಟೆಯೊಳಗೆ ನುಸುಳಿ ಆ ಕೋಟೆಯನ್ನು ಗೆದ್ದನಂತೆ. ಆದ್ದರಿಂದ ಅವನ ವಂಶದವರಿಗೆ ಘೋರ್ಪಡೆಯೆಂಬ ಹೆಸರು ಬಂದಿದೆ.

**ಪರಾಮರ್ಶನ ಗ್ರಂಥಗಳು**


- Cotton, H. E. A. (1922). A History of the Mahrattas. *Bulletin of the School of Oriental and African Studies*, *2*(2), 321–328. https://doi.org/10.1017/s0041977x00102150
- Nandakumar, S. (2020). *Rise and fall of the Maratha Empire 1750-1818*. Notion Press.
- Ghar, S. G. (2023). *Marathas contribution in deccan plateau*. Ashok Yakkaldevi.
- Sardesai, G. S. (1957). *New history of the Marathas*.
- Kadam, U. A. (2008). *History of the Marathas: French-Maratha Relations, 1668-1818*.